Available online at www.elixirpublishers.com (Elixir International Journal)

Language and Testing

ISSN: 2229-712X

Elixir Lang. & Testing 68 (2014) 24493 -24496

# Tatvapadas and Philosophers Philosophical Stances
# "ತತ್ವಪದಗಳು ಮತ್ತು ತತ್ವಪದಕಾರರು" "ತಾತ್ವಿಕ ನಿಲುವುಗಳು"

Bullannavar Basusab, ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ, Govt First Grade College Gadag, Karnataka

**ARTICLE INFO**

**Article history:**
Received: 22.January 2014;
Received in revised form:
10 February 2014;
Accepted: 25 March 2014;

**Keywords**
Tatvapada - ತತ್ವಪದಗಳು
Philosophers - ತತ್ವಪದಕಾರರು
Philosophical - ತಾತ್ವಿಕ
Village - ಗ್ರಾಮೀಣ
Language - ಕನ್ನಡ

**ABSTRACT**

"Theoretical" literature is, in a way, the literature containing the ideals and values of vachana literature. Tattupada is a collection of philosophical life experiences. Philosophy has been the order of Indian culture since then till today. Philosophical literature is the best form of literature that transcends the discrimination of class-color-caste-gender in our life. Philosophers seem to have given the understanding of literature at a time when creativity was lost and dull. Haridasa tradition, Veerashaiva tradition, Bhaktichaluvali, Vachanasahitya Bhaktipanth these philosophies have given knowledge about life to common people.

"ಸೈದ್ಧಾಂತಿಕ" ಸಾಹಿತ್ಯವು ಒಂದು ರೀತಿಯಲ್ಲಿ ವಚನ ಸಾಹಿತ್ಯದ ಆದರ್ಶಗಳು ಮತ್ತು ಮೌಲ್ಯಗಳನ್ನು ಒಳಗೊಂಡಿರುವ ಸಾಹಿತ್ಯವಾಗಿದೆ. ತತ್ತುಪದವು ತಾತ್ವಿಕ ಜೀವನದ ಅನುಭವಗಳ ಸಂಗ್ರಹವಾಗಿದೆ. ಅಂದಿನಿಂದ ಇಂದಿನವರೆಗೂ ಭಾರತೀಯ ಸಂಸ್ಕೃತಿಯ ಕ್ರಮವೇ ತತ್ವಶಾಸ್ತ್ರ. ತಾತ್ವಿಕ ಸಾಹಿತ್ಯವು ನಮ್ಮ ಜೀವನದಲ್ಲಿ ವರ್ಗ-ಬಣ್ಣ-ಜಾತಿ-ಲಿಂಗಗಳ ತಾರತಮ್ಯವನ್ನು ಮೀರಿದ ಸಾಹಿತ್ಯದ ಅತ್ಯುತ್ತಮ ರೂಪವಾಗಿದೆ. ಸೃಜನಶೀಲತೆ ಕಳೆದು ನಿಸ್ತೇಜವಾಗಿದ್ದ ಕಾಲದಲ್ಲಿ ತತ್ವಜ್ಞಾನಿಗಳು ಸಾಹಿತ್ಯದ ತಿಳುವಳಿಕೆಯನ್ನು ನೀಡಿದಂತಿದೆ. ಹರಿದಾಸ ಸಂಪ್ರದಾಯ, ವೀರಶೈವ ಸಂಪ್ರದಾಯ, ಭಕ್ತಿಚಲುವಲಿ, ವಚನಸಾಹಿತ್ಯ ಭಕ್ತಿಪಂಥ ಈ ತತ್ವಗಳು ಜನಸಾಮಾನ್ಯರಿಗೆ ಬದುಕಿನ ಜ್ಞಾನವನ್ನು ನೀಡಿವೆ.

© 2014 Elixir All rights reserved.

**1 ಪೀಠಿಕೆ:**

15ನೇ ಶತಮಾನದ ನಂತರದ ಸಾಹಿತ್ಯದಲ್ಲಿ "ತತ್ವಪದವೆಂಬ" ಸಾಹಿತ್ಯ ತನ್ನದೇ ಆದ ವಿಶೇಷತೆ, ವಿಶಿಷ್ಟತೆಯನ್ನು ಪಡೆದುಕೊಂಡು ಸಾಹಿತ್ಯವಾಗಿದೆ. ಒಂದು ರೀತಿಯಲ್ಲಿ ವಚನ ಸಾಹಿತ್ಯದ ಆದರ್ಶ, ಮೌಲ್ಯಗಳನ್ನು ಒಳಗೊಂಡು ಕನ್ನಡ ಸಾಹಿತ್ಯಕ್ಕೆ ಹೊಸ ಚೈತನ್ಯವನ್ನು ಸಮಾಕಾಲೀನ ಬದುಕಿಗೆ ಅಧ್ಯಾತ್ಮಿಕತೆಯನ್ನು ತಂದುಕೊಟ್ಟ ಸಾಹಿತ್ಯ ತತ್ವಪದ ಸಾಹಿತ್ಯವಾಗಿದೆ. ತತ್ವಪದ ತಾತ್ವಿಕ ಬದುಕಿನ ಅನುಭವಗಳ ಸಂಗ್ರಹ ಭಾರತೀಯ ಸಂಸ್ಕೃತಿಯ ಒಂದು ತತ್ವಪದವಿದ್ದಂತೆ. ಅಂದಿನಿಂದ ಇಂದಿನ ವರೆಗೂ ಭಾರತ ಒಂದು ರಾಷ್ಟ್ರ ಒಂದು ಜನಾಂಗ ಸಂಸ್ಕೃತಿಯ ಪ್ರತೀಕವಾಗಿ ನಿಂತಿರುವದು ಭಾರತೀಯ ಸಂಸ್ಕೃತಿಯ ಕ್ರಮವಾಗಿದೆ. ಆ ಹಿನ್ನೆಲೆಯಲ್ಲಿ ಈ ತತ್ವಪದ ಸಾಹಿತ್ಯ ನಮ್ಮ ಜೀವನ ವರ್ಗ–ವರ್ಣ–ಜಾತಿ–ಲಿಂಗಬೇಧವನ್ನು ಮೀರಿ ನಿಂತ ಶ್ರೇಷ್ಟ ಸಾಹಿತ್ಯ ಪ್ರಕಾರವಾಗಿದೆ ಎಂದು ಹೇಳಬಹುದು.

**2 ವಿಷಯ:**

ಸಾಹಿತ್ಯವನ್ನು ಸಾಂಸ್ಕೃತಿಕ – ಸಾಮಾಜಿಕ – ರಾಜಕೀಯ–ಧಾರ್ಮಿಕ ದೃಷ್ಟಿಯಿಂದಲೂ ಅಭ್ಯಾಸ ಮಾಡಬೇಕೆನ್ನುವ ವಾದಗಳು ವ್ಯಾಪಕ ಬೆಂಬಲ ಪಡೆದ ಮೇಲೆ, ಸಾಹಿತ್ಯವನ್ನು ನೋಡುವ ನಮ್ಮ ದೃಷ್ಟಿಯಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಈ ದ್ರಷ್ಟಿಯಿಂದ ಕೇವಲ ಅನಕ್ಷರಸ್ಥ ಹಳ್ಳಿಗರಿಂದ ರಚನೆಯಾದ ಸಾಹಿತ್ಯವೆಂದು ನಿರ್ಲಕ್ಷಿತವಾಗಿದ್ದ ಅನೇಕ ಸಾಹಿತ್ಯ ಪ್ರಕಾರಗಳಿಗೆ ವಿಶೇಷ ಮಹತ್ವ ಬರತೊಡಗಿದೆ. ಇಂಥ ಸಾಹಿತ್ಯ ಪ್ರಕಾರಗಳಲ್ಲಿ ತತ್ವಪದ ಸಾಹಿತ್ಯವೂ ಒಂದಾಗಿದೆ. ತತ್ವಪದ ಸಾಹಿತ್ಯ ತತ್ವ, ಆದರ್ಶಜೀವನ, ವೈವಿಧ್ಯತೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವದರಿಂದ ಅದು ಹೆಚ್ಚು ಜನಪ್ರೀಯವಾಗಿದೆ.

"ಶಿಷ್ಟಸಾಹಿತ್ಯ ತನ್ನ ಸ್ವತಂತ್ರ ಸೃಜನಶೀಲತೆಯನ್ನು ಕಳೆದುಕೊಂಡು ಮಂಕಾಗಿದ್ದ ಕಾಲದಲ್ಲಿ ಕರ್ನಾಟಕ ಗ್ರಾಮೀಣ ಪ್ರದೇಶಗಳ ಮೂಲೆ ಮೂಲೆಗಳಲ್ಲಿ ತತ್ವಪದಕಾರರು ವಿಲಕ್ಷಣ ಜೀವಂತಿಕೆಯಿಂದ ಕಾರ್ಯನಿರತರಾಗಿದ್ದಾರೆಂಬ ತಿಳುವಳಿಕೆ ಸಾಹಿತ್ಯದ ನಮ್ಮ ಅಭ್ಯಾಸಕ್ಕೆ ಹೊಸದೊಂದು ತಿರುವನ್ನೇ ನೀಡಿದಂತಾಗಿದೆ.1

## 1. Introduction

In the literature after 15th century, the literature called "Tatvapada" has acquired its own specialty and uniqueness. In a way, Vachana Sahitya is a literary philosophical literature that has brought a new spirit to Kannada literature, including ideals and values, and spirituality to contemporary life. Philosophy A collection of philosophical life experiences is a philosophy of Indian culture. From then till today, India is a state and a symbol of ethnic culture. In that background, it can be said that this philosophical literature is a great literary genre that transcends the class-color-caste-gender distinction of our life.

## 2. Content

Arguments that literature should be practiced from a cultural-social-political-religious point of view have gained widespread support, and there have been significant changes in our view of literature. From this point of view many literary genres which were neglected as literature composed only by illiterate villagers started getting special importance. Philosophical literature is one of such literary genres. Philosophical literature is more popular because of its emphasis on philosophy, idealism, diversity.

"At a time when literary literature has lost its independent creativity and faded away, the understanding that philosophers in the nooks and crannies of Karnataka's rural areas are busy with exotic vitality has given a new twist to our practice of literature.1

Tele: 8861814506
E-mail addresses:bullannavarbasusab@gmail.com

© 2014 Elixir All rights reserved

"ಶಿಷ್ಟಸಾಹಿತ್ಯ ತನ್ನ ಸ್ವತಂತ್ರ ಸೃಜನಶೀಲತೆಯನ್ನು ಕಳೆದುಕೊಂಡು ಮಂಕಾಗಿದ್ದ ಕಾಲದಲ್ಲಿ ಕರ್ನಾಟಕ ಗ್ರಾಮೀಣ ಪ್ರದೇಶಗಳ ಮೂಲೆ ಮೂಲೆಗಳಲ್ಲಿ ತತ್ವಪದಕಾರರು ವಿಲಕ್ಷಣ ಜೀವಂತಿಕೆಯಿಂದ ಕಾರ್ಯನಿರತರಾಗಿದ್ದಾರೆಂಬ ತಿಳುವಳಿಕೆ ಸಾಹಿತ್ಯದ ನಮ್ಮ ಅಭ್ಯಾಸಕ್ಕೆ ಹೊಸದೊಂದು ತಿರುವನ್ನೇ ನೀಡಿದಂತಾಗಿದೆ.1

ಹರಿದಾಸ ಪರಂಪರೆ ಮತ್ತು ವೀರಶೈವ ಸ್ವರವಚನಗಳ ಪರಂಪರೆ ಈ ಅವಧಿಯಲ್ಲಿ ಹೊಸದೊಂದು ರೂಪವನ್ನೇ ಪಡೆದುಕೊಂಡು ವ್ಯಾಪಕ ಜನಾಂದೋಲನವಾಗಿ ಬೆಳೆದದ್ದು ಈ ಕಾಲಾವಧಿಯ ವಿಶೇಷವೆನ್ನಬಹುದು. ಭಕ್ತಿಚಳುವಳಿ, ವಚನಸಾಹಿತ್ಯ ಭಕ್ತಿಪಂಥ ಪ್ರಮುಖ ಪ್ರಕಟಣೆಗಳಾದವು ತತ್ವಪದಗಳು ಕೇವಲ ವೈಷ್ಣವ, ವೀರಶೈವ, ಮುಸ್ಲೀಂ ಅಥವಾ ಅವುಗಳ ಕಲಸು ಮೇಲೋಗರದ ತತ್ವಪದಗಳನ್ನು ಪ್ರತಿಪಾದಿಸುವ ರಚನೆಗಲ್ಲ. "ತಮ್ಮ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ಒತ್ತಡಗಳನ್ನು ಎದುರಿಸುವ ಆಧುನಿಕತೆಗೆ ಸ್ಪಂದಿಸುವ ತಂತ್ರಗಳೂ ಆಗಿವೆ.2

ಎಂಬುದು ಮಹತ್ವದ ಮಾತು. ಜಾತಿ ವ ಲಿಂಗಗಳನ್ನು ಪರಿಗಣಿಸದೇ ವ್ಯಕ್ತಿಯ ಘನತೆ ಸಾಧನೆಯ ಸ್ತ್ರೀಯನ್ನು ಈ ಸಾಹಿತ್ಯ ಹೇಗೆ ಒಡಮೂಡಿಸಿತು ಎಂಬುದು ಗಮನಿಸುವ ಅಂಶವಾಗಿದೆ. ಶಿಷ್ಟ ಸಾಹಿತ್ಯದಂತೆ ಕೇವಲ ಸಮಾಜದ ಮೇಲ್ವರ್ಗಗಳ ಓದಿಗೆ ಸೀಮಿತವಾಗದೇ ಭಾರತೀಯ ಸಂಸ್ಕೃತಿಯ ಅತ್ಯಂತ ವಿಶಿಷ್ಟ ಅಭಿವ್ಯಕ್ತರೂಪವಾದ ಮೌಖಿಕ ಮಾಧ್ಯಮದ ಅನಂತ ಸಾಧ್ಯತೆಗಳನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡ ರಚನೆಗಳನ್ನು ಕೆಲವು ತತ್ವಪದಗಳನ್ನು ಬರೆದು ಇಟ್ಟಿದ್ದರೂ ಅವುಗಳ ಪ್ರಸಾರವಾದದ್ದು "ಹಾಡಿನ ಮೂಲಕ ಭಜನೆಗಳ ಮೂಲಕ. ಮಠಗಳು, ಗುಡಿಗಳು, ಅನುಭಾವಗೋಷ್ಠಿಗಳು, ಭಜನಾ ಮೇಳಗಳು ಹಳ್ಳಿಗಾಡಿನ ಮೂಲೆ ಮೂಲೆಗಳಲ್ಲಿ ಇಂದಿಗೂ ಕ್ರೀಯಾಶೀಲವಾಗಿದ್ದು, ಪುಟ್ಟ ಸಂಸ್ಕೃತಿ ಕೇಂದ್ರಗಳಾಗಿ, ಬಹುದೊಡ್ಡ ಸಂಖ್ಯೆಯ ಅನಕ್ಷರಸ್ಥರಲ್ಲಿ ಸಾಂಸ್ಕೃತಿ ಪ್ರಸಾರದ ಮಹತ್ವದ ಕೆಲಸ ಮಾಡುತ್ತಿವೆ. ಅಕ್ಷರದ ನೆರವಿಲ್ಲದೇ ಒಂದು ಜನಾಂಗ ಹೇಗೆ ತನ್ನ ಸಂಸ್ಕ್ರತಿಯನ್ನು ಅಭೂತಪೂರ್ವಕವಾಗಿ ಬೆಳೆಸಿಕೊಳ್ಳಬಲ್ಲದೆಂಬುದಕ್ಕೆ ಇದೊಂದು ದೊಡ್ಡ ನಿದರ್ಶನವಾಗಿದೆ.3

ಎಚ್. ಎಸ್. ವೆಂಕಟೇಶಮೂರ್ತಿ ಹೇಳುವಂತೆ "ತತ್ವಪದಕಾರರು ಎಲ್ಲ ಜಾತಿಯ ಮರಗಳ ಕಾಡು ಇದ್ದಂತೆ ಎಂಬುದು ಗಮನಾರ್ಹವಾದುದು.4

ತತ್ವಪದಗಳು ಜನಸಾಮಾನ್ಯರಿಗೆ ಬದುಕಿನ ಬಗ್ಗೆ ತಿಳುವಳಿಕೆ ನೀಡಿವೆ. ಅಧ್ಯಾತ್ಮಿಕ ಅರ್ಥನೀಡಿವೆ. ನೈತಿಕ ಮಾರ್ಗದರ್ಶನ ನೀಡಿವೆ. ಪದ ಬಗ್ಗೆ ಒಲವು ಇದ್ದರೂ ಇದರ ಬಗ್ಗೆ ಸಾಕಷ್ಟು ಕಾಳಜಿ ವಹಿಸಿವೆ. ತತ್ವಪದಕಾರರು ಬಂಡಾಯ ಮನೋಧರ್ಮದ ಸ್ಥಾಪಕರೆಂದು ಗುರುತಿಸಲಾಗುತ್ತಿದೆ. ಈಚೆಗೆ ಕನ್ನಡ ಕಾವ್ಯ ಸ್ಥಗಿತ ಸ್ಥಿತಿಗೆ ಬಂದಂತೆ ಕಾಣುವ ಸಂದರ್ಭದಲ್ಲಿ ನಮ್ಮ ಕವಿಗಳು ತತ್ವಪದಗಳ ಬಗೆಗೆ ಆಸಕ್ತಿವಹಿಸುತ್ತಿರುವದು ಒಂದು ಮುಖ್ಯ ಬೆಳವಣಿಗೆಯಾಗಿ ನೋಡಬಹುದಾಗಿದೆ. ಅವುಗಳಲ್ಲಿ ಮೌಲಿಕ ಅಂಶಗಳು ಇವೆ ಎಂಬುದು ನಮಗೆ ಕಂಡುಬರುತ್ತದೆ.

ಅನುಭಾವ ಪದ್ಯಗಳಿಗೆ ಭಜನೆ ಪದಗಳೆಂದು, ತತ್ವಪದಗಳೆಂದು, ಸ್ವರವಚನಗಳೆಂದು ಹೆಸರುಗಳಿವೆ. ತತ್ವಪದ ಎಂಬ ಹೆಸರು ಉಳಿದೆಲ್ಲ ಹೆಸರುಗಳನ್ನು ಒಳಗೊಂಡಿದೆ. "ತತ್ವಪದಗಳಿಗೆ ಮೂಲ 12ನೇ ಶತಮಾನದ ವಚನಕಾರರ ಸ್ವರವಚನಗಳು ಎಂಬ ಅಭಿಪ್ರಾಯವಿದೆ. ವಚನಕಾರರ ನಂತರ ಬತ್ತಿ ಹೋದ ಸಾಹಿತ್ಯಕ್ಕೆ ಮತ್ತೇ ಮರುಜೀವವನ್ನು ಪಡೆದುಕೊಂಡಿತು. ನಿಜಗುಣವಂದ ಶಿವಯೋಗಿಗಳಿಂದ ಆದರೆ ಇದು 17 ನೇ ಶತಮಾನದಲ್ಲಿ ಮತ್ತೆ ಪುಟಿಯಿತು.5

ಅಂದಿನಿಂದ ಇಂದಿನವರೆಗೂ ಇದು ಜೀವಂತವಾಗಿದೆ. ಸಾವಿರಾರು ಸಂಖ್ಯೆಯಲ್ಲಿ ತತ್ವಪದಕಾರರು ಹುಟ್ಟಿ ಬಂದಿದ್ದಾರೆ. ಈವತ್ತಿಗೂ ನಮ್ಮ ಹಳ್ಳಿಗಳಲ್ಲಿ ತತ್ವಪದಕಾರರಿದ್ದಾರೆ. ಅವರು ಜನರನ್ನು ಕೂಡಿಕೊಂಡು ಏಕದಾರಿ ಹಿಡಿದು ತತ್ವಪದಗಳನ್ನು ಹಾಡುತ್ತಾರೆ. ಜನಸಾಮಾನ್ಯರ ನೇರ ಸಂಪರ್ಕದಲ್ಲಿ ಇವರ ಬದುಕು ಬೆರೆತು ಸಾಧನೆಯ ಸಿದ್ಧಿಗೆ ಪೂರಕವಾಗಿತ್ತು. ತತ್ವಪದಕಾರರಲ್ಲಿ 100ಕ್ಕೆ 90ರಷ್ಟು ಅದ್ವೈತಿಗಳು, ಅದು ಶಕ್ತಿವಿಶಿಷ್ಟಾದ್ವೈತಿಗಳು ಹೊರನೋಟಕ್ಕೆ ಹಾಗೆ ಕಂಡರೂ ಅವರು ವಚನಕಾರರ ತತ್ವಾನುಯಾಯಿಗಳು. ಈ ಮಾತು ಅವರ ಪದಗಳಿಂದ ಧೃಡಪಡುತ್ತದೆ. ಜೈನರು ಮತ್ತು ವೈಷ್ಣವರಲ್ಲಿ ತತ್ವಪದಕಾರರಿದ್ದಾರೆ. ಇವರು ಇನ್ನುಳಿದ ತತ್ವಪದಕಾರರಿಗಿಂತ ಹೆಚ್ಚು ಪ್ರಚಾರವಾಗಿಲ್ಲ ಇವರ ಸಂಖ್ಯೆಯೂ ಕಡಿಮೆ. 17ನೇಶತಮಾನದಿಂದ ಬಂದ ತತ್ವಪದಕಾರರು ಹಿಂದಿನ ತತ್ವಪದಕಾರರಿಗಿಂತ ಭಿನ್ನವೆನಿಸುತ್ತಾರೆ. ಹಿಂದಿನ ತತ್ವಪದಕಾರರಲ್ಲಿ ಮೇಲಂತಸ್ತಿನವರೇ ಎದ್ದು ಕಾಣುತ್ತಾರೆ. ಕೆಳವರ್ಗದ ತತ್ವಪದಕಾರರು ಕಡಿಮೆ.

The heritage of Haridasa and Veerashaiva swaravachanas took a new form during this period and grew into a widespread popular movement. Bhaktichaluvali, Vachanasahitya Bhaktipantha became important publications the heritage of Haridasa and Veerashaiva swaravachanas took a new form during this period and grew into a widespread popular movement. Bhaktichaluvali, vachanasahitya Bhaktipantha important publications Tatvapada is not just a structure that advocates Vaishnava, Veerashaiva, Muslim or their cognate Tatvapada. "They are also strategies for responding to modernity in dealing with the political, religious, and social pressures of their time.2

That is an important word. It is interesting to note how this literature emphasized the dignity of a woman regardless of caste and gender. Although polite literature was not limited to the reading of the upper classes of the society, it effectively exploited the infinite possibilities of the oral medium, the most distinctive form of expression of Indian culture. "Through Bhajans through song. Mathas, Gudis, Anubhavasanthams, Bhajan Melas are still active in every nook and cranny of the countryside as little cultural centres, doing the important work of spreading culture among a large number of illiterate people. This is a great example of how a nation can develop its culture unprecedentedly without the help of letters.3

H. S. As Venkateshamurthy states "It is significant that Tatvapadakas are like a forest of trees of all species.4

Tatvapadas gave common people an understanding of life. It has a spiritual meaning. They have given moral guidance. Although there is a fondness for the word, there is a lot of concern about it. Philosophers are recognized as the founders of rebel mentality. Recently, when Kannada poetry seems to have come to a standstill, it can be seen as an important development that our poets are interested in philosophy. We find that there are essential elements in them.

Anubhava padyas have names like bhajane padas, tatvapadas and swaravachanas. The name Tatvapada includes all other names. "Tatvapadas are thought to have originated as swaravachanas by 12th-century vachanakaras. After the vachanakaras, the moribund literature was revived by the Nijagunavanda Shivayogis, but it resurfaced in the 17th century.5

It is alive till today. Philosophers have been born in thousands. Even today there are philosophers in our villages. He gathers the people and leads them in one direction and chants Tatvapadas. His life was mixed in direct contact with the common people and complemented his achievements.

It is alive till today. Philosophers have been born in thousands. Even today there are philosophers in our villages. He gathers the people and leads them in one direction and chants Tatvapadas. His life was mixed in direct contact with the common people and complemented his achievements. 90 out of 100 of the philosophies are Adaitis, even if they look like that, they are the followers of the Vachankaras. This statement is confirmed by his words. Among the Jains and Vaishnavas there are philosophers. They are not more popular than other philosophers and their number is also less. Philosophers from the 17th century are different from earlier philosophers. Among the previous philosophies, only the elite stand out. The lower class philosophers are few. No caste, creed, caste, or color can be found among philosophers after the 17th century. Philosophers are born from all walks of life. His association was more with the common people 17th century was a time of political, social and religious upheaval.

17ನೇ ಶತಮಾನದ ನಂತರದಲ್ಲಿನ ತತ್ವಪದಕಾರರಲ್ಲಿ ಮತ, ಪಂಥ, ವರ್ಗ, ವರ್ಣ ಯಾವುದೂ ಕಂಡುಬರುವದಿಲ್ಲ. ಜೀವನದ ಎಲ್ಲ ಸ್ತರಗಳಿಂದ ತತ್ವಪದಕಾರರು ಹುಟ್ಟಿಬಂದಿದ್ದಾರೆ. ಇವರ ಒಡನಾಟ ಸಾಮಾನ್ಯ ಜನರೊಂದಿಗೆ ಹೆಚ್ಚಾಗಿತ್ತು 17ನೇ ಶತಮಾನ ರಾಜಕೀಯವಾಗಿ ಸಾಮಾಜಿಕವಾಗಿ, ಧಾರ್ಮಿಕವಾಗಿ ವಿಪ್ಲವದ ಕಾಲವಾಗಿತ್ತು. ರಾಜಕೀಯವಾಗಿ ಜನರು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದರು. ಭದ್ರತೆ ಇರಲಿಲ್ಲ ಜೀವಕ್ಕೆ ನೆಮ್ಮದಿ ಇರಲಿಲ್ಲ ಆಳುವವರಿಂದ ಸಮಾಜದಲ್ಲಿ ಪ್ರತಿಷ್ಠಿತ ಎನಿಸಿಕೊಂಡವರಿಂದ ಸಾಮಾನ್ಯ ಜನರ ಕೌಟುಂಬಿಕ ಬದುಕು ಹದಗೆಟ್ಟಿತ್ತು. ಇಂಥ ಕಾಲದಲ್ಲಿ ತತ್ವಪದಕಾರರು ತಮ್ಮ ಅಧ್ಯಾತ್ಮಿಕ ಮಾತುಗಳಿಂದ ಪ್ರೀಯವಾದ ನುಡಿಗಳಿಂದ ಜನರ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡಲು ಶ್ರಮಿಸಿದರು. "ತತ್ವಪದಕಾರರು ಅನೇಕ ಪದಗಳಿಗೆ ಒಂದು ಹಿನ್ನೆಲೆ ಇರುತ್ತದೆ. ಒಂದು ಘಟನೆಯಿರುತ್ತದೆ. ಇದನ್ನು ಕಂಡು ಹಿಡಿಯುವ ಕಾರ್ಯ ನಡೆಯಬೇಕಾಗಿದೆ. ಅವರು (ಆಶು ಕವಿಗಳು) ಹೋದಲ್ಲೆಲ್ಲಾ ಜನರ ಮಧ್ಯೆ ನಿಂತು ಅವರ ಆಗುಹೋಗುಗಳಿಗೆ ಸ್ಪಂದಿಸಿ ಕವಿತೆಗಳನ್ನು ಕಟ್ಟಿದರು. ಆಶುಕವಿಗಳು ಅದೇ ತತ್ವಪದಗಳಾಗಿ ಜನಮನ್ನಣೆ ಪಡೆದುಕೊಂಡಿವೆ.6

ತತ್ವಪದಕಾರರು ಇಂದಿನ ಜೀವನಕ್ಕೂ ಅತ್ಯಂತ ಪ್ರಸ್ತುತರು. ಆದರೆ ಕನ್ನಡ ಸಾಹಿತ್ಯದಲ್ಲಿ ಇವರು ಅಲಕ್ಷ್ಯಗೊಳಪಟ್ಟಿದ್ದಾರೆ. ತತ್ವಪದಕಾರರು ಕರಾವಳಿ ಪ್ರದೇಶವನ್ನು ಬಿಟ್ಟು ಕರ್ನಾಟಕದ ಉಳಿದ ಎಲ್ಲ ಭಾಗಗಳಲ್ಲಿ ಕಂಡು ಬರುತ್ತಾರೆ. ಉತ್ತರ ಕರ್ನಾಟಕ ಹೈದರಾಬಾದ್ ಕರ್ನಾಟಕದಲ್ಲಿ ಇವರ ಸಂಖ್ಯೆ ಹೆಚ್ಚು. ಇಂದಿಗೂ ಆಯಾ ಭಾಗಗಳಲ್ಲಿ ತತ್ವಪದಕಾರರು ಜೀವಂತವಾಗಿದ್ದಾರೆ. ಈ ತತ್ವಪದಕಾರರನ್ನು ಗುರುತಿಸದೇ ಹೋದರೆ ಕನ್ನಡ ಸಾಹಿತ್ಯಕ್ಕೆ ಹಾನಿಯೊಂದೆ ಅಲ್ಲ ತತ್ವಪದಕಾರರನ್ನು ಕುರಿತು ದ್ರೋಹವೆಸಗಿದಂತಾಗುತ್ತದೆ.

ತತ್ವಪದಗಳು ಹುಟ್ಟಿದ ಸಮಾಜದ ಬದುಕಿನ ಲಯವೇ ಬೇರೆ ವ್ಯಕ್ತಿ ಮತ್ತು ಸಮುದಾಯದ ಸಂಬಂಧ, ವ್ಯಕ್ತಿತ್ವ ಬೆಳವಣಿಗೆ, ಸಮುದಾಯದ ಮನಸ್ಸಿನ ಆರೋಗ್ಯ ಸಹನೆ, ವಿನಯ, ವಿಶ್ವಾಸ, ಧರ್ಮಶಿಕ್ಷಣ, ಭಕ್ತಿ ಮತ್ತು ಯೋಗದ ಅನುಭವ ಇವು ತತ್ವಪದಗಳ ಕೆಲವು ಮುಖ್ಯ ಆಸಕ್ತಿಗಳು. ಕನ್ನಡ ಸಾಂಸ್ಕೃತಿಯ ಸ್ವರೂಪವನ್ನು ಅರಿಯಲು ವಿವಿಧ ಜಾತಿ, ಮತ್ತು ವರ್ಗಗಳ ಜನ ರಚಿಸಿರುವ ತತ್ವಪದಗಳು ಮುಖ್ಯವಾದ ರಚನೆಗಳಾಗಿವೆ. ಕನ್ನಡದ ಒಳ್ಳೆಯ ಹಾಡುಗಳಾಗಿ, ಸರಳ, ತತ್ವನಿರೂಪಣೆಗಳಾಗಿ ತಮ್ಮ ಪ್ರತಿಪಾದನೆಗಳಿಂದ ಗಂಭೀರ ಚಿಂತನೆಯನ್ನು ಪ್ರಚೋದಿಸುವ ಸಾಮರ್ಥ್ಯ ತತ್ವಪದಗಳಿಗಿದೆ. ತತ್ವಪದಗಳು ವಿಶಾಲವಾದ ಅರ್ಥದಲ್ಲಿ ಧಾರ್ಮಿಕ ಪಠ್ಯಗಳು; ಭಕ್ತಿ ಚಳುವಳಿಯ ಚಿಂತನೆ, ತತ್ವ ಮತ್ತು ಮೌಲ್ಯಗಳನ್ನು ವ್ಯಾಪಕವಾಗಿ ಹರಡುವದಕ್ಕೆ ಸಹಾಯ ಮಾಡಿದ ಶಾಬ್ಧಿಕ ರಚನೆಗಳು.

"ಕನ್ನಡದಲ್ಲಿ ತತ್ವಪದಗಳನ್ನು ಅನೇಕ ಹೆಸರುಗಳಿಂದ ಕರೆದು ಗುರುತಿಸುವ ಪರಿಪಾಠವಿದೆ. ಕನ್ನಡ ತತ್ವಪದಗಳನ್ನು ರಚಿಸಿದವರಲ್ಲಿ ವಿವಿಧ ಮತ ಧರ್ಮಗಳಿಗೆ ಸೇರಿದ ನೂರಾರು ಜನರಿದ್ದರೂ ಹೆಚ್ಚಿನ ಸಂಖ್ಯೆಯವರು ವೀರಶೈವ ಭಕ್ತಿ ಚಳುವಳಿಯಿಂದ ಪ್ರಚೋದಿತರಾದವರು. ಹನ್ನೆರಡನೆಯ ಶತಮಾನದ ಸಾಮಾಜಿಕ ಸಾಂಸ್ಕೃತಿಕ ಚಳುವಳಿಯ ಪ್ರಭಾವ ಮುಂದಿನ ಶತಮಾನಗಳಲ್ಲಿ ಕನ್ನಡದ ಬದುಕಿನ ಮೇಲೆ ಅನೇಕ ರೀತಿಯ ಪರಿಣಾಮಗಳನ್ನು ಬೀರಿತು. ಶಾಬ್ದಿಕ ರಚನೆಗಳಲ್ಲಿ ಅನೇಕ ದೇಸಿ ರೂಪಗಳು ಕಂಡು ಬಂದವು. ಅಷ್ಟಕ, ಶತಕ, ತಾರಾವಳಿ, ಕಾಲಜ್ಞಾನ, ಉದ್ಧರಣೆವಾಚ್ಯ ಹೀಗೆ ಅನೇಕ ಪ್ರಕಾರಗಳು ಹುಟ್ಟಿಕೊಂಡವು.7

ಸ್ತೋತ್ರ, ಪ್ರಾರ್ಥನೆ, ಸಂದೇಶ, ಭಕ್ತಿ–ಜ್ಞಾನ ವೈರಾಗ್ಯ, ಬೋಧನೆ ಮತತ್ವದ ಪ್ರಕ್ರಿಯೆಗಳ ನಿರೂಪಣೆ, ಧಾರ್ಮಿಕ ಆಚರಣೆಯ ವಿಧಿ ವಿಧಾನಗಳು, ಧಾರ್ಮಿಕ ವಿಚಾರಗಳ ಪರಿಚಯ ಇವು ಈ ಎಲ್ಲ ಪ್ರಕಾರಗಳ ಮುಖ್ಯ ಆಸಕ್ತಿಗಳಾಗಿದ್ದವು. ಈ ವೈವಿಧ್ಯಮಯ ಶಾಬ್ದಿಕ ರಚನೆಗಳಲ್ಲಿ ತತ್ವಪದಗಳೂ ಸೇರುತ್ತವೆ. ಜೀವನದ ಮೌಲ್ಯ ರೀತಿ–ನೀತಿಗಳೇ ಇವುಗಳಿಗೆ ವಿಷಯ ವಸ್ತುವಾಗಿ ಸೇರಿಕೊಂಡವು. 12ನೇ ಶತಮಾನದ ವಚನಕಾರರೇ ಅಧ್ಯಾತ್ಮಿಕ ಗೀತೆಗಳನ್ನು ಮೊದಲು ರಚಿಸಿದರರು. ಈ ಗೀತೆಗಳ ಪ್ರಭಾವದಿಂದ 15, 16ನೇಯ ಶತಮಾನಗಳಲ್ಲಿ ಹರಿದಾಸ್'ರ ಕೀರ್ತನೆಗಳು, ಜೈನಮತದ ಭಕ್ತಿಗೀತೆಗಳು, 18, 19ನೇಯ ಶತಮಾನದ ತತ್ವಪದಗಳು ವಿಸ್ತಾರಗೊಂಡವು ಎಂದು ನಾವು ತಿಳಿಯಬಹುದು. ವಚನ, ಸ್ವರವಾಚನ, ಸ್ವರಪದ, ಪದಗಳು, ಗೀತೆ ಇವೆಲ್ಲವೂ ಹಾಡು ಎಂಬುದಕ್ಕೆ ಪರ್ಯಾಯವಾಚಿಗಳಾಗಿ ಬಳಕೆಯಾಗಿರುವದನ್ನು ಕಾಣಬಹುದು.

ಸುಶಿಕ್ಷಿತ ತತ್ವಪದಕಾರರ ಧೋರಣೆಯಲ್ಲಿ ತರ್ಕಭದ್ದ, ಪ್ರತಿಪಾದನೆ ತಾತ್ವಿಕ ಕಲ್ಪನೆಗಳ ವಿವರಣೆ. ನಿರ್ದಿಷ್ಟರಾಗ ತಾಳಗಳ ಬಳಕೆ ಇಂಥ ಕೆಲವು ಲಕ್ಷಣಗಳನ್ನು ಗುರುತಿಸಬಹುದು. ಇದಕ್ಕೆ ಪ್ರತಿಯಾಗಿ ಇನ್ನೊಂದು ಧಾರೆಯ ತತ್ವಪದಗಳಿವೆ. ಇವು 'ಸುಶಿಕ್ಷಿತ'ವಲ್ಲ ಆದರೆ ಅನುಭವ ನಿಷ್ಠವಾದವು. ಧಾರ್ಮಿಕ ಸಂಸ್ಥೆಗಳ ಆಶ್ರಯದಲ್ಲಿ ಬೆಳೆದವಲ್ಲ, ಆದರೆ ಇಂಥ ಪದಗಳನ್ನು ರಚಿಸಿದವರು ತಮ್ಮ ತಮ್ಮ ಊರುಗಳಲ್ಲಿ ಸಂತರೆಂದು ಮಹಾತ್ಮರೆಂದು ಮನ್ನಣೆಗಳಿಸಿದವರು.

Politically people were facing many difficulties. There was no security, there was no comfort in life, the family life of the common people of A, who became prominent in the society, had deteriorated. Philosophers in such times strove to bring peace to the minds of the people with their spiritual words and endearing words. "Many words of philosophers have a background. There is an event. We need to find this out. Wherever they (Ashu poets) went, they stood in the midst of people and wrote poems in response to their happenings. Ashuka poets have gained popular recognition as the same philosophers.6

Philosophers are very relevant to today's life. But he is neglected in Kannada literature. Tatvapadakaras are found in all other parts of Karnataka except the coastal region. Their number is more in North Karnataka Hyderabad Karnataka. Philosophers are still alive in their respective parts. If these philosophers are not recognized, it will not be a detriment to Kannada literature but a betrayal of the philosophers. Tatvapadas are some of the main interests of Tattupadas, the rhythm of life of the society in which the Tatvapadas were born. Relationship between individual and community, personality development, health tolerance of the community mind, humility, trust, religious education, devotion and yoga experience. Philosophies created by people of various castes and classes are important structures to understand the nature of Kannada culture. As good Kannada songs, Tatvapadas have the ability to provoke serious thought with their propositions as simple, philosophical statements. Tatvapadas are religious texts in the broadest sense; Literary structures that helped spread the thought, philosophy and values of the Bhakti movement widely. "In Kannada there is a tradition of calling Tatvapadas by many names. There are hundreds of people belonging to various sects who composed Kannada Tatvapadas, but a large number were inspired by the Veerashaiva Bhakti movement. The influence of the social and cultural movement of the twelfth century had many different effects on Kannada life in the following centuries. Many desi forms were found in verbal structures. Ashtaka , Shataka, Taravali, Kalajnana, Uddharanevachya and many other genres arose.7

Hymns, prayers, messages, devotional-knowledge asceticism, exposition of teaching and religious processes, rites of passage, introduction of religious ideas were the main interests of all these genres. Among these diverse lexical formations are also philosophies. Values and principles of life were added to these as content. The 12th century Vachanas were the first to compose spiritual hymns. We can know that under the influence of these songs, the kirtans of Haridas, the devotional songs of Jainism, the philosophies of the 18th and 19th centuries expanded in the 15th and 16th centuries. Vachana, swaravachana, swarapada, words, song are all used as substitutes for song.

Argument, Proposition Explanation of philosophical ideas in the attitude of well-educated philosophers. Some of these features can be identified by the use of specific rhythms. In contrast to this there is another stream of philosophy. These are not 'educated' but experiential. Not raised under the auspices of religious institutions, but those who created such words were recognized as Saints and Mahatmas in their respective towns. It seems that people believed the places they ran to were sacred. In all the districts of Kannada, innumerable saints, their words, their rituals, which remain unknown to our well-educated knowledge of today, created a sacred geography, which is known through the words of Tatvapadas.

ಅವರು ಇದ್ದ ಓಡಿಯಾಡಿದ ಸ್ಥಳಗಳನ್ನು ಜನ ಪವಿತ್ರವೆಂದು ನಂಬಿದ್ದು ಕಾಣುತ್ತದೆ. ಕನ್ನಡನಾಡಿನೆಲ್ಲ ಜಿಲ್ಲೆಗಳಲ್ಲಿ, ಇಂದಿನ ನಮ್ಮ ಸುಶಿಕ್ಷಿತ ತಿಳಿವಿಗೆ ಬಾರದೆ ಉಳಿದಿರುವ, ಅಸಂಖ್ಯಾತ ಸಂತರು, ಅವರ ನುಡಿ, ಅವರ ಆಚರಣೆ ಎಲ್ಲ ಪವಿತ್ರ ಭೂಗೋಳವೊಂದು ಸೃಷ್ಟಿಯಾಗಿದ್ದು, ತತ್ವಪದಗಳಿಂದ ತಿಳಿಯುತ್ತದೆ. ತತ್ವಪದ ಪರಂಪರೆಯನ್ನು ರೂಪಿಸಲು ಪ್ರೇರಣೆ ನೀಡಿದ ಶ್ರೇಯಸ್ಸು ನಮ್ಮ ಜನಪದರಿಗೆ ಸಲ್ಲುತ್ತದೆ. ಶ್ರಮವನ್ನು ನೀಗಿಸಲು ಈ ತರಹದ ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ತತ್ವಪದಗಳು ಇನ್ನಿತರ ಸಾಹಿತ್ಯರೂಪಗಳಂತೆ ಕೇವಲ ಒಂದು ಕಾವ್ಯ ಪ್ರಕಾರ ಎಂದು ಪರಿಗಣಿಸುವದು ಸೂಕ್ತವಾಗಲಾರದು. ಏಕೆಂದರೆ ಇಂದಿಗೂ ಉತ್ತರ ಕರ್ನಾಟಕದ ಹಲವೆಡೆಗಳಲ್ಲಿ ಉಳಿದು, ಬೆಳೆದು ಬಂದಿರುವ ತತ್ವಪದಗಳನ್ನು ಗಮನಿಸಿದರೆ ಅದಕ್ಕೊಂದು ಸಾಮೂಹಿಕ ಚಹರೆ ಇರುವದು ಕಂಡು ಬರುತ್ತದೆ. ತನ್ನದೇ ಆದ ಭವ್ಯಪರಂಪರೆಯನ್ನು ಅದು ಪಡೆದುಕೊಂಡಿರುವದು ಕಂಡು ಬರುತ್ತದೆ.

ತತ್ವಪದಗಳು ಅನುಭಾವ ಸಾಹಿತ್ಯದ ಒಂದು ಅಂಗ,

ಅನ್ಯೋಕ್ತಿಯ ಒಂದು ಲೋಕವೇ ತತ್ವಪದಗಳಲ್ಲಿ ಕಾಣುತ್ತದೆ. ಕೌಟುಂಬಿಕ, ಸಂಬಂಧ ಗಂಡು ಹೆಣ್ಣಿನ ಸಂಬಂಧ ವ್ಯವಸಾಯ ಇಂಥ ಅನ್ಯೋಕ್ತಿಗಳು ಹೇರಳವಾಗಿ ಕಾಣಸಿಗುತ್ತವೆ. ಇವೆಲ್ಲ ಗುರು–ಶಿಷ್ಯ, ದೇವ–ಭಕ್ತ ಅಥವಾ ಪಾರಮಾರ್ಥಿಕ ಸಾಧನೆಯ ಮೂಲಗಳನ್ನು ಮಾಚಿಸುವ ಅನ್ಯೋಕ್ತಿಗಳಾಗಿವೆ. ಇದು ಕನ್ನಡ ತತ್ವಪದಗಳಲ್ಲಿ ಕಾಣುವಂತೆಯೇ ಭಾರತದ ಇತರ ಭಾಷೆಗಳ ರಚನೆಗಳು ಎದ್ದು ಕಾಣುವ ಅಂಶ. "ಕನ್ನಡ ತತ್ವಪದಗಳ ಬಾಹ್ಯ ಲಕ್ಷಣಗಳಲ್ಲಿ ಮುಖ್ಯವಾದ ಕೆಲವನ್ನು ಗಮನಿಸಬಹುದು. ತತ್ವಪದಗಳು ಸಾಮಾನ್ಯವಾಗಿ ಬೆಸಸಂಖ್ಯೆಯ ಸ್ಟಾಂಜಾಗಳನ್ನು ಹೊಂದಿರುತ್ತವೆ. ಕನ್ನಡದ ವಚನಗಳಿಗಿಂತ ಭಿನ್ನವಾದ ರಚನಾಕ್ರಮವನ್ನು ಅನುಸರಿಸುತ್ತವೆ.8

ವಚನಗಳು ಸಾಮಾನ್ಯವಾಗಿ ನಿದರ್ಶನಗಳನ್ನು ವಿವರವಾಗಿ ಕಟ್ಟಿಕೊಡುತ್ತಾ ಕೊನೆಗೆ ಒಂದು ತೀರ್ಮಾನವನ್ನು ಮುಟ್ಟಿದರೆ ತತ್ವಪದಗಳು ಮೊದಲಿಗೇ ಒಂದು ತೀರ್ಮಾನವನ್ನು ಮಂಡಿಸಿ ಆಮೇಲೆ ಅದಕ್ಕೆ ಅಗತ್ಯವಾದ ನಿದರ್ಶನಗಳನ್ನು ನೀಡುತ್ತಾ ಹೋಗುತ್ತವೆ. ಆದಿಪ್ರಾಸ ಬಹಳಷ್ಟು ರಚನೆಗಳಲ್ಲಿ ಕಾಣುತ್ತದೆ. ಅಂಶಗಣವಾದ ಬಳಕೆ ವ್ಯಾಪಕವಾಗಿದ್ದರೂ ಮಾತ್ರಾಗಣಗಳೂ ದೊಡ್ಡ ಪ್ರಮಾಣದಲ್ಲಿಯೇ ಪ್ರಯೋಗಗೊಂಡಿವೆ. ಕಥನ, ನಾಟಕೀಕರಣ, ಭಾವಗೀತೆ ಮತ್ತು ತತ್ವ ವಿವರಣೆಯ ವಿಧಾನಗಳು ಪ್ರಮುಖವಾಗಿ ಕಾಣುತ್ತವೆ.

ತತ್ವಪದಕಾರರು ಒಂದು ಜಾತಿ ಜನಾಂಗಕ್ಕೆ ಸೀಮಿತವಾದವರಲ್ಲ. ಎಲ್ಲ ದೇವರುಗಳ ಪ್ರತಿಪಾದಕರು, ಮೇಲು ಮತ್ತು ಕೀಳಸಂಸ್ಕೃತಿಗಳು ಒಪ್ಪಿರುವ ಸಂಕೇತಗಳ ಬಗ್ಗೆ ಸ್ವೀಕಾರ ಮನೋಭಾವ ತಾಳಿದ್ದಾರೆ. ವೈವಿಧ್ಯಮಯ ಸಂಕೇತ ಮತ್ತು ಆಚರಣೆಗಳ ನಡುವೆ ಅಂತರಂಗದ ಅನುಭಾವದ ಏಕತೆಯನ್ನು ಅನ್ವೇಷಿಸುತ್ತಾರೆ. ಜಾತಿಗಳ ಕಟ್ಟು ಕಟ್ಟಳೆಗಳನ್ನು ಎಲ್ಲ ತತ್ವಪದಕಾರರು ಅನುಭಾವಿಗಳೂ ತಿರಸ್ಕರಿಸುತ್ತಾರೆ. ಪರಸ್ಪರ ಸಹಬಾಳ್ವೆಯ ವಿಶಾಲ ಪರಿಕಲ್ಪನೆಯನ್ನು ಮುಸ್ಲಿಂ ಮತ್ತು ದಲಿತ ತತ್ವಪದಕಾರರ ರಚನೆಗಳಲ್ಲಿ ಕಾಣಬಹುದು.

**3. ಸಮಾರೋಪ**

ತತ್ವಪದಗಳು ಬಳಸುವ ಭಾಷೆಯು ಭಿನ್ನವಾದ ನೆಲೆಗಳಲ್ಲಿ ವ್ಯಕ್ತವಾಗುತ್ತ ಬಳಕೆಯಾಗುತ್ತಿರುತ್ತದೆ. ತತ್ವಪದಕಾರರು ಕನ್ನಡನಾಡಿನ ಎಲ್ಲ ಜಿಲ್ಲೆಗಳಲ್ಲೂ ಕಾಣುತ್ತಾರೆ. ಅವರು ಬಳಸುವ ಶಬ್ದರಾಶಿಯಲ್ಲಿ ಪಾರಿಭಾಷಿಕ ಪರಿಕಲ್ಪನೆಗಳು ಸಮಾನವಾಗಿ ಕಂಡು ಬಂದರೂ ತಮ್ಮ ತಮ್ಮ ಪ್ರದೇಶಗಳ ಶಬ್ದಕೋಶದ ಬಳಕೆ ಎದ್ದುಕಾಣುತ್ತದೆ. ನಿಜಗುಣಶಿವಯೋಗಿ, ಕೈವಾರತಾತಯ್ಯ, ಶಿಶುನಾಳಶರೀಫ್, ಕಡಕೋಡ ಮಡಿವಾಳಪ್ಪ, ಚನ್ನೂರು ಜಲಾಲಸಾಹೇಬರು ಪ್ರಮುಖ ತತ್ವಪದಕರರಾಗಿ ಇಂದಿಗೂ ಮುಂದುವರೆಸಿಕೊಂಡು ಬಂದಿದೆ.

**ಪರಾಮರ್ಶನ ಗ್ರಂಥಗಳು:**


೧. ಸಂತರು ಶರಣರು–ಸಾಹಿತ್ಯ ಪರಿಷತ್ತು ಎಚ್. ತಿಪ್ಪೇರುದ್ರಸ್ವಾಮಿ

೨. ತತ್ವಪದಕಾರರು ಎಲ್ಲ ಜಾತೀಯ ಮರಗಳ ಕಾಡು ಎಚ್. ಎಸ್. ವೆಂಕಟೇಶಮೂರ್ತಿಯವರ ಲೇಖನ

೩. ಪುರಂದರದಾಸರು ಸಾಹಿತ್ಯ ಅಕಾಡೆಮಿ, ನವದೆಹಲಿ, ವರದರಾಜಜಿ

೪. ಸಾಮಾಜಿಕ ಚಳುವಳಿಗಳು – ಆರ್ಕೆ ಮಣಿಪಾಲ್ ನವಕರ್ನಾಟಕ ಪ್ರಕಾಶನ, ಬೆಂಗಳೂರು

೫. ಅನುಭಾವ ಸಾಂಸ್ಕೃತಿಕ ಹುಡುಕಾಟ – ಡಾ. ಬಸವರಾಜ ಕಲ್ಗುಡಿ

೬. ತತ್ವಪದಕಾರರು – ರಹಮತ ತರೀಕೆರೆ ಲೇಖನ


Credit goes to our people for inspiring the creation of Tatvapada heritage. He has made a unique contribution to this kind of literature to overcome the hardships. It may not be appropriate to consider Tatvapadas as just a form of poetry like other literary forms. Because if we look at the principles that have survived and grown in many parts of North Karnataka even today, it will be seen that it has a collective face. It can be seen that it has got its own grand heritage.

Tatvapadas is a part of empirical literature,

A world of otherness is seen in Tatvapadas. Family, relationship male female relationship agriculture such relationships are seen in abundance. All these are guru-shishya, deva-devotee or aliens who hide the sources of otherworldly attainment. This is a feature that stands out in the structures of other Indian languages as seen in Kannada philosophies. "A few important external features of Kannada Tatvapadas may be noted. Tatvapadas usually have an odd number of stanzas. They follow a different structure than Kannada vachanas.8

Vachanas generally relate the examples in detail and finally reach a conclusion while Tatvapadas first present a conclusion and then go on to provide the necessary examples for it. Adiprasa appears in many structures. Although herbal use is widespread, pharmaceuticals have also been experimented on a large scale. Narrative, dramatization, lyricism and expository methods are prominent.

Philosophers are not limited to one caste. Proponents of all gods, both high and low cultures, are receptive to accepted symbols. Explores the unity of feeling between different symbols and rituals. Caste restrictions are rejected by all philosophers and empiricists. A broader concept of mutual coexistence can be found in the writings of Muslim and Dalit philosophers.

**3. Conclusion**

The language used in philosophies is expressed and used in different contexts. Tattupadakars are found in all districts of Kannada. Although the terminological concepts are similar in the vocabulary they use, their use of the vocabulary of their respective regions stands out. Nijagunashivayogi, Kaivarathathaya, Shishunalsharif, Kadakoda Madivalappa, Channur Jalalasaheb as important philosophers have continued to this day.

**Reference Books**


1. Satharu Sharanaru-Sahitya Parishath H. Tipperudraswamy
2. Philosophers are forest of all caste trees H. S. Article by Venkateshamurthy
3. Purandadasaru Sahitya Akademi, New Delhi, Varadarajaji
4. Social Movements - RK Manipal Navkarnataka Prakashan, Bangalore
5. Experience Cultural Search - Dr. Basavaraja Kalgudi
6. Philosophers - Rahmat Tarikere Article